ಸತ್ಯವತಿ ಲಿಫ್ಟ್ ಹತ್ತಿದ್ದು ಅದೇ ಮೊದಲ ಸಾರಿ. ಒಂದು ಮನೆ ಮುಂದೆ ನಿಂತ ಮಾಧವರಾಯರು ಕಾಲಿಂಗ್ ಬೆಲ್ ಒತ್ತುತ್ತಿದ್ದಂತೆ ಇಪ್ಪತ್ತು ವರ್ಷದ ಯುವತಿಯೊಬ್ಬಳು ಬಂದು ಬಾಗಿಲು ತೆಗೆದಳು.

"ದುರ್ಗಾ, ಅಕ್ಕನ್ನ ಒಳಗೆ ಕರ್ಕೊಂಡು ಹೋಗು..." ಎಂದರು ಮಾಧವರಾಯರು. ಆ ಯುವತಿ ಸತ್ಯವತಿ ಕೈಲಿದ್ದ ಬ್ಯಾಗನ್ನು ತೆಗೆದುಕೊಂಡು ಅವಳನ್ನು ಒಂದು ಮಲಗುವ ರೂಮಿಗೆ ಕರೆದುಕೊಂಡು ಹೋದಳು.

"ಅಮ್ಮಾ, ನೀವು ಇವತ್ತು ರೆಸ್ಟ್ ತಗೊಳ್ಳಿ. ರಾತ್ರಿಯೆಲ್ಲಾ ಪ್ರಯಾಣ ಮಾಡಿ ಆಯಾಸವಾಗಿರುತ್ತೆ. ನಾಳೆ ಬೆಳಗ್ಗೆಯೇ ನಿಮ್ಮನ್ನ ಟೆಸ್ಟ್‌ಗಳಿಗೆ ಕರ್ಕೊಂಡು ಹೋಗ್ತೀನಿ."

ಸತ್ಯವತಿ ಅವನ ಮಾತಿಗೆ ಮೌನವಾಗಿ ತಲೆದೂಗಿದಳು.

ಮಾಧವರಾಯರು ಹೊರಟುಹೋದರು.

ಸತ್ಯವತಿ ಕಾಲಕೃತ್ಯ ಮುಗಿಸಿಕೊಳ್ಳುತ್ತಿದ್ದಂತೆ ದುರ್ಗ ತಿಂಡಿ, ಕಾಫಿ ತಂದುಕೊಟ್ಟಳು. ಮನೆಯನ್ನೆಲ್ಲಾ ತೋರಿಸಿದಳು. ಹಾಲು, ಅಡಿಗೆಮನೆ, ಎರಡು ಬೆಡ್‌ರೂಮಿನ ಮನೆ. ಆದರೆ ಆ ಮನೆಯಲ್ಲಿ ಯಾರೂ ಕಣ್ಣಿಗೆ ಬೀಳಲಿಲ್ಲ. ಒಂದು ಟೀವಿ, ಫ್ರಿಡ್ಜ್, ಎರಡು ಮಂಚಗಳು, ನಾಲ್ಕು ಕುರ್ಚಿ ಬಿಟ್ಟರೆ ಅಂತ ಹೆಚ್ಚಿನ ಸಾಮಾನುಗಳೂ ಇರಲಿಲ್ಲ.

"ಅಮ್ಮನವರೆಲ್ಲಿ?" ಕೇಳಿದಳು ಸತ್ಯ.

"ಆಸ್ಪತ್ರೆಯಲ್ಲಿದಾರೆ. ಇವತ್ತು ಡಯಾಲಿಸಿಸ್ ಇದೆ." ಹೇಳಿದಳು ದುರ್ಗ.

"ಮಾಧವರಾಯಯ್ಯ ನಿಮ್ಮ ತಂದೆಯವರಾ?" ಹೌದು ಎನ್ನುವಂತೆ ತಲೆದೂಗಿದಳು ದುರ್ಗ.

"ನೀವೆಷ್ಟು ಜನ ಅಕ್ಕತಂಗಿಯರು?"

ದುರ್ಗ ಮುಗುಳುನಗುತ್ತಾ ಮೂರು ಅಲ್ಬಮ್‌ಗಳನ್ನು ತಂದು ಅವಳ ಮುಂದಿಟ್ಟು ಹೇಳಿದಳು.

"ಈ ಅಲ್ಬಮ್ ನೋಡ್ತಿರಿ. ನಮ್ಮ ಕುಟುಂಬದವರೆಲ್ಲಾ ಅದರಲ್ಲಿದಾರೆ. ಅಡಿಗೆಮನೆಯಲ್ಲಿ ಸ್ವಲ್ಪ ಕೆಲಸವಿದೆ. ಮುಗಿಸ್ಕೊಂಡು ಬರ್ತೀನಿ..." ಎನ್ನುತ್ತ ದುರ್ಗ ಹೊರಟುಹೋದಳು.

ಬೆಡ್‌ರೂಮಿನಲ್ಲಿ ಮಂಚದ ಮೇಲೆ ಕುಳಿತು ಒಂದು ಆಲ್ಬಮ್ ನೋಡತೊಡಗಿದಳು. ಮೊದಲ ಪುಟದಲ್ಲಿ 'ಪರಿವರ್ತನೆ ಬೀದಿಯ ಮಕ್ಕಳ ಪುನರ್ವಸತಿ ಕೇಂದ್ರ' ಎಂದಿತ್ತು. ಒಂದೊಂದು ಪುಟ ತಿರುವುತ್ತಾ ಹೋದಳು. ಪ್ರತಿಪುಟದಲ್ಲೂ ಮಾಧವರಾಯರು, ಅವರ ಪಕ್ಕದಲ್ಲಿ ಸುಂದರವಾದ ಸ್ತ್ರೀ, ಬೇರೆ ಬೇರೆ ಸಂದರ್ಭಗಳಲ್ಲಿ ಮಕ್ಕಳೊಡನೆ ತೆಗೆದ ಫೋಟೋಗಳು, ಅವರ ಸೇವೆಯನ್ನು ಗುರ್ತಿಸಿ ಸರ್ಕಾರದಿಂದ ಅವರಿಗೆ ದೊರೆತ ಪ್ರಶಂಸಾಪತ್ರಗಳು, ಅಭಿನಂದನಾ ಪತ್ರಗಳಿಂದ ತುಂಬಿತ್ತು.

ಎರಡನೆಯ ಆಲ್ಬಮ್ ತೆಗೆದಳು ಸತ್ಯವತಿ. 'ಆಸರೆ – ವೃದ್ಧಾಶ್ರಮ' ಅದರಲ್ಲೂ ಎಷ್ಟೋ ಜನ ಹಣ್ಣೆಲೆಯಂಥ ವೃದ್ಧರಿಗೆ ಆಸರೆಯಾಗಿ ನಿಂತಿದ್ದ ಮಾಧವರಾಯರು, ಅವರ ಪಕ್ಕದಲ್ಲಿ ಅದೇ ಸ್ತ್ರೀ, ಎಷ್ಟೋ ಜನ ದಾತರ ಸಹಕಾರ, ಅವರ ಸೇವಾಕಾರ್ಯಕ್ರಮಗಳು, ಆ ವೃದ್ಧರ ಕಣ್ಣುಗಳಲ್ಲಿ ಆನಂದಬಾಷ್ಪಗಳು.

ಸತ್ಯವತಿ ಮತ್ತೊಂದು ಆಲ್ಬಮ್ ಕೈಗೆ ತೆಗೆದುಕೊಂಡಳು. ಯಾಂತ್ರಿಕವಾಗಿ ಒಂದೊಂದು ಪುಟ ತಿರುಗಿಸತೊಡಗಿದಳು. ಆ ಆಲ್ಬಮ್ಮಿನ ಶೀರ್ಷಿಕೆ 'ಆಪತ್‌ಬಂಧು' – ಉಚಿತ ವೈದ್ಯಶಾಲೆ. ಪ್ರತಿಯೊಂದು ಫೋಟೋದಲ್ಲಿಯೂ ಡಾಕ್ಟರಾಗಿ ಮಾಧವರಾಯರು, ಅವರ ಪಕ್ಕದಲ್ಲಿ ಅದೇ ಸುಂದರ ಸ್ತ್ರೀಮೂರ್ತಿ. ಬಡವರ ಪಾಲಿನ ಆತ್ಮೀಯ ಬಂಧುವಿನಂತೆ ಅವರು ಕೈಗೊಂಡಿದ್ದ ಸೇವಾಕಾರ್ಯಕ್ರಮಗಳು. ಆರೋಗ್ಯ ಶಿಬಿರಗಳು.

ಮೂರು ಆಲ್ಬಮ್‌ಗಳನ್ನು ಪಕ್ಕದಲ್ಲಿಟ್ಟಳು.

'ಮಾಧವರಾಯರ ಪಕ್ಕದಲ್ಲಿರೋ ಆ ಅಮೃತಮೂರ್ತಿ ಯಾರು? ಅವರಿಗೂ ಆ ಸ್ತ್ರೀಗೂ ಇರುವ